ಇ) ಹಾಗಿದ್ದಲ್ಲಿ ಎಲ್ಲಿ ಮಂಜೂರು ಮಾಡಲಾಗಿದೆ?

ಈ) ಹಾಗಿಲ್ಲದಿದ್ದಲ್ಲಿ ಸದರಿ ಕ್ಷೇತ್ರದ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಆರೋಗ್ಯ ಘಟಕ ಮಂಜೂರು ಮಾಡಲಾಗುವುದೇ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 3

1. ಪ್ರಾಥಮಿಕ ಆರೋಗ್ಯ ಘಟಕ, ಕೃಷ್ಣಮೂರ್ತಿಪುರಂ

2. ಪ್ರಾಥಮಿಕ ಆರೋಗ್ಯ ಘಟಕ, ಜಯನಗರ

3. ಪ್ರಾಥಮಿಕ ಆರೋಗ್ಯ ಘಟಕ, ಹಳೇ ಅಗ್ರಹಾರ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಮೈಸೂರು ನಗರದ ಹೊಸ ಬಡಾವಣೆಗಳಲ್ಲಿ ಗ್ರಂಥಾಲಯ ತೆರೆಯುವುದು

1589 (1988) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಹಾಲಿ ಎಲ್ಲೆಲ್ಲಿ ಗ್ರಂಥಾಲಯಗಳಿವೆ;

ಆ) ಮೈಸೂರು ನಗರದಲ್ಲಿ ಹೊಸ ಹೊಸ ಬಡಾವಣೆಗಳು ನಿರ್ಮಾಣಗೊಳ್ಳುತ್ತಿದ್ದು, ಇದಕ್ಕೆ ಅನುಗುಣವಾಗಿ ಹೊಸದಾಗಿ ಗ್ರಂಥಾಲಯ ತೆರೆಯುವ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಎಲ್ಲೆಲ್ಲಿ ಹೊಸ ಗ್ರಂಥಾಲಯ ತೆರೆಯಬೇಕೆಂದು ಸಾರ್ವಜನಿಕರಿಂದ ಮನವಿ ಬಂದಿದೆ;

ಈ) ಈ ಬಗ್ಗೆ ಸರ್ಕಾರದ ನಿಲುವೇನು;

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪಟ್ಟಿ ಲಗತ್ತಿಸಿದೆ

ಆ) ಹೊಸ ಬಡಾವಣೆಗಳಲ್ಲಿ ಹಂತ ಹಂತವಾಗಿ ಗ್ರಂಥಾಲಯಗಳನ್ನು ತೆರೆಯಲಾಗುವುದು

ಇ) ಸದ್ಯಕ್ಕೆ ಈ ಕೆಳಕಂಡ ಸ್ಥಳಗಳಿಂದ ಮನವಿಗಳು ಬಂದಿರುತ್ತವೆ.

1. ಬೇಟಗನಹಳ್ಳಿ
2. ಜೆ.ಎಸ್.ಎಸ್. ಬಡಾವಣೆ
3. ರಾಮಕೃಷ್ಣನಗರ
4. ವಿದ್ಯಾರಣ್ಯಪುರ
5. ಕೆಬ್ಬಾಳ

ಪ್ರಾಧಿಕಾರದ ಹುದ್ದೆಯಾಕಿನ ಅವಧಿಮಿತಿ ಮತ್ತು ನಿಬ್ಬಂಧಿ ಮಂಜೂರಾತಿಯೊಂದಿಗೆ ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಮೈಸೂರು ನಗರದಲ್ಲಿರುವ ಗ್ರಂಥಾಲಯಗಳು	
ಕೇಂದ್ರ ಗ್ರಂಥಾಲಯ, ಸಯ್ಯಾಜಿರಾವ್ ರಸ್ತೆ	1
ಶಾಖಾ ಗ್ರಂಥಾಲಯಗಳು :	
1. ಜಯಲಕ್ಷ್ಮೀಪುರಂ	1
2. ಲಕ್ಷ್ಮೀಪುರಂ	1
3. ಆಶೋಕಪುರಂ	1
4. ಕೆ.ಕೆ. ಸ್ಯಾನಿಟೋರಿಯಂ	1
5. ಗಾಂಧಿನಗರ	1
6. ಸಿದ್ದಾರ್ಥನಗರ	1
7. ಸರಸ್ವತೀಪುರಂ	1
8. ಹೆಬ್ಬಾಳ ಬಡಾವಣೆ	1
9. ಮಾಣಿವಿಲಾಸಪುರಂ	1
10. ಕುವೆಂಪುನಗರ	1
ಒಟ್ಟು	11
ಸೇವಾ ಕೇಂದ್ರಗಳು (ಪಾಚಕಾಲಯಗಳು)	
1. ಆಂಜನೇಯ	1
2. ಹೆಬ್ಬಾಳ	1
3. ಕುರಾಗ್ರಹ	1
4. ಕೆ.ಎಸ್.ಆರ್.ಟಿ	1
ಸಂಚಾರಿ ಗ್ರಂಥಾಲಯ :	1
ಒಟ್ಟು	5

ಕಿರುಗಾವಲು ಕ್ಷೇತ್ರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಿಬ್ಬಂದಿ ನೇಮಕಾತಿ

1590 (1726) ಶ್ರೀ ತಮ್ಮಣ್ಣ ಡಿ.ಸಿ (ಕಿರುಗಾವಲು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಕಿರುಗಾವಲು ಕ್ಷೇತ್ರದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?